ಸಮರ್ಪಣೆಯ ಭಾವದಿಂದ, ಭಕ್ತಿಯಿಂದ ನಡೆದುಕೊಳ್ಳುವುದೇ ಸರಿಯೆಂದು ಅಖ್ತರ ಭಾವಿಸಿದ್ದ. ತದನಂತರ ಅಖ್ತರ ಮತ್ತೊಂದು ನಿಖಾ ಮಾಡಿಕೊಂಡು, ವ್ಯಾಪಾರದಲ್ಲಿ ತೊಡಗಿದ್ದನಾದರೂ ಯಾವುದೇ ಸಾವಿನ ಸುದ್ದಿ ಬಂದಾಗ ಅವನದೇ ಖಾಲಿತನ ಮತ್ತು ಅರ್ಥಹೀನವಾದ ಈ ಖಾಸಗೀ ನಷ್ಟವು ಮತ್ತೆ ಮತ್ತೆ ಅವನನ್ನು ಕಾಡುತ್ತಿತ್ತು. ಹೀಗಾಗಿಯೇ ಮುಕುಂದಸಾಗರನ ಈ ಅರ್ಥಹೀನ ಸಾವೂ ಅವನನ್ನು ಆಳವಾಗಿ ತಟ್ಟಿತ್ತಲ್ಲದೇ ತಕ್ಷಣಕ್ಕೆ ಏನು ಮಾಡಬೇಕೆನ್ನುವುದು ತಿಳಿಯದಾಯಿತು. ಹೀಗೆ ಅವನು ಬೇರೊಂದೇ ಜಗತ್ತಿಗೆ ಪ್ರಯಾಣ ಕೈಗೊಂಡು ವಾಪಸ್ಸಾಗುವ ವೇಳೆಗೆ ಪ್ರಪಂಚವೇ ಮೂಲಭೂತವಾಗಿ ಬದಲಾಗಿಬಿಟ್ಟಿದೆ ಎನ್ನಿಸಿತು.

ಈಗ ಮುಕುಂದಸಾಗರ ಇಲ್ಲ ಅನ್ನುವುದು ಒಂದು ಆಘಾತಕಾರಿ ಸುದ್ದಿಯಾದರೆ, ಎರಡು ತಿಂಗಳ ಹಿಂದೆ ಅವನು ತೀರಿಕೊಂಡ ಈ ಸುದ್ದಿ ಜಗತ್ತಿಗೆಲ್ಲ ಗೊತ್ತಿದ್ದರೂ ಅಖ್ತರನಿಗೆ ತಿಳಿದಿರಲಿಲ್ಲ ಎನ್ನುವುದರಲ್ಲಿಯೂ ಯಾವುದೋ ಅನ್ಯಾಯವಾಗಿದೆ ಎಂದೂ ಅವನಿಗೆ ತಕ್ಷಣಕ್ಕನ್ನಿಸಿತು. ಅವನ ಸಹಪಾಠಿಯಾಗಿದ್ದ, ಅವನು ಹೇಗಿದ್ದರೆ ಹಾಗೆ ನಿಷ್ಕಲ್ಮಷವಾಗಿ ತನ್ನ ಈ ಹೊಸ ನಂಬಿಕೆ ಮತ್ತು ಆಚಾರಗಳನ್ನು ಪ್ರಶ್ನಾತೀತವಾಗಿ ಒಪ್ಪಿ ಅಪ್ಪಿದ್ದ ಸುಜಾತಾಳ ಜೀವನದಲ್ಲಿ ನಡೆದ ಈ ಆಘಾತಕಾರಿ ಘಟನೆಯಾದಾಗ ತಕ್ಷಣಕ್ಕೆ ಎರಡು ಸಾಂತ್ವನದ ಮಾತುಗಳನ್ನೂ ಹೇಳಲಾಗದೇ ಇದ್ದ ಪರಿಸ್ಥಿತಿಯ ಅಸಹಾಯಕತೆ ಅಖ್ತರನನ್ನು ತಟ್ಟಿತು. ಅವನಿಗೆ ಎಂದೂ ಹಿತವನ್ನೇ ಬಯಸಿದ್ದ, ಕಷ್ಟದ ಸಮಯದಲ್ಲಿ ಸಹಾಯ ಹಸ್ತವನ್ನು ನೀಡಿದ್ದ ಸುಜಾತಾಳ ಜೀವನದಲ್ಲಿ ಈ ರೀತಿಯ ಒಂದು ತೂಫಾನು ಆಗಿರುವಾಗ ಏನೂ ತಿಳಿಯದಂತೆ, ಒಂದು ಸಾಂತ್ವನದ ಮಾತನ್ನೂ ಅವಳಿಗೆ ಹೇಳದೆಯೇ ಅವನು ಉಳಿದುಹೋಗಿದ್ದ.

ಈ ಆಧುನಿಕ ಯುಗದಲ್ಲಿ ತಂತ್ರಜ್ಞಾನವು ಸರ್ವವ್ಯಾಪಿಯಾಗಿರುವಾಗ ಸಂವಹನ ಮಾಧ್ಯಮಗಳಿರುವಾಗ ಈ ಸುದ್ದಿ ಅವನನ್ನು ತಟ್ಟಿಯೇ ಇರಲಿಲ್ಲ ಎನ್ನುವುದನ್ನು ಅರಗಿಸಿಕೊಳ್ಳಲು ಅಖ್ತರನಿಗೆ ಸಾಧ್ಯವಾಗಲಿಲ್ಲ. ಎಲ್ಲ ಕೊಂಡಿಗಳನ್ನೂ ಕಳಚಿ ನೈರೋಬಿಯ ತನ್ನ ವ್ಯಾಪಾರ ಮತ್ತು ಸಂಸಾರದ ಸೀಮಿತ ಗುಹೆಯಲ್ಲಿ ಅಡಗಿರುವುದರಲ್ಲಿ ಅವನ ಮನಃಶಾಂತಿಯ ಸ್ವಾರ್ಥವಿತ್ತೇ? ಹೀಗೆ ಯಾಕಾಯಿತು?... ಮತ್ತು ಈಗ ಏನು ಮಾಡಬೇಕು?... ಸುಜಾತಾಳ ಜೊತೆ ನೇರವಾಗಿ ಮಾತಾಡಲು ಅಖ್ತರನಿಗೆ ಸಾಕಷ್ಟು ಹಿಂಜರಿಕೆಯಾಯಿತು. ಬದಲಿಗೆ ಮೊದಲಿಗೆ ಬೆಂಗಳೂರಿನಲ್ಲಿದ್ದ ಸಹಪಾಠಿ ಅನಿರುದ್ಧನಿಗೆ ವಾಟ್ಸ್‌ಆ್ಯಪ್ ಕಾಲ್ ಮಾಡಿದ.

★★★

ಈಗ ಈ ಕರೆ ಬಂದಾಗ ಇದನ್ನು ಸ್ವೀಕರಿಸಿ ಮಾತನಾಡಬೇಕೋ ಬಾರದೋ ಎಂದು ಅನಿರುದ್ಧನಿಗೆ ಗೊಂದಲವಾಯಿತು. ಫೇಸ್‌ಬುಕ್ಕಿನ ಮೇಲೆ ಅನ್–ಫ್ರೆಂಡ್ ಮಾಡುವುದು ಹೆಚ್ಚಿನ ಸಾಹಸದ ವಿಷಯವಲ್ಲ. ಆದರೆ ಅವನಾಗಿಯೇ ಸಂಪರ್ಕಿಸಿದಾಗ ಉತ್ತರಿಸಬೇಕೋ ಬಾರದೋ ಅನ್ನುವ ದ್ವಂದ್ವ ಅನಿರುದ್ಧನನ್ನು ಕಾಡಿತು. ಅವನ ಕರೆಯನ್ನು ಸ್ವೀಕರಿಸದಿರಲು ಕಾರಣಗಳೆಂದರೆ ಅವನು ಈಗ ಏನು ಮಾಡುತ್ತಿದ್ದಾನೆನ್ನುವುದು ತಿಳಿದಿಲ್ಲ... ಹಾಗೂ ಅವನು ನಾಲ್ಕು ತಿಂಗಳ ಹಿಂದೆ ಭಾರತಕ್ಕೆ ಬಂದು ತನ್ನ ಜೊತೆಯಿದ್ದಾಗ ಅವನ ಬಗ್ಗೆ ವಿಚಾರಣೆಗೆಂದು ಸ್ಥಳೀಯ ಅಧಿಕಾರಿಗಳು ಬಂದಿದ್ದರು ಎನ್ನುವುದಾಗಿತ್ತು. ಅನಿರುದ್ಧನಿಗೆ ಅಖ್ತರನ ಆಗಮನದ ಸಮಯದಲ್ಲಾದ ಪೊಲೀಸರ ಭೇಟಿ ಮೊದಲನೆಯದ್ದಾಗಿತ್ತು. ಸುಜಾತಾಳ ಗಂಡ ಮುಕುಂದಸಾಗರ ಸಾವಿನ ಸಮಯದಲ್ಲೂ ಪೊಲೀಸರು ಅವನ ಮನೆಗೆ ಭೇಟಿನೀಡಿದ್ದರು. ಈ ಬಾರಿ ಅನಿರುದ್ಧನನ್ನೇ ಪ್ರಶ್ನಿಸಿದ್ದರು. ಅನಿರುದ್ಧ ಸಾವಿನ ಸುದ್ದಿ ಬಂದ ಕೂಡಲೆ ಮುಂಬೈಗೆ ಹೋಗಿ ಬಂದದ್ದೂ ಹಾಗೂ ಸುಜಾತಾಳ ಜೊತೆ ಪ್ರತಿನಿತ್ಯ ಕರೆ ಮಾಡಿ ಮಾತಾಡುತ್ತಿದ್ದದ್ದೇ ಇದಕ್ಕೆ ಕಾರಣವಾಗಿತ್ತು. ತಾನು ಏನೂ